UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Saturday
21-11-2026

Udayavani pg 08

ಡಿ.1ರಿಂದ ರಾಜ್ಯಾದ್ಯಂತ ಆ್ಯಪ್ ಆಧಾರಿತ ರಸಗೊಬ್ಬರ ಮಾರಾಟ

ರಾಮನಗರ: ಇದುವರೆಗೆ ಚಿತ್ರದುರ್ಗ, ತುಮಕೂರು ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಜಾರಿಯಲ್ಲಿದ್ದ ಆ್ಯಪ್ ಆಧಾರಿತ ರಸಗೊಬ್ಬರ ಮಾರಾಟ ವ್ಯವಸ್ಥೆ ಡಿ.1ರಿಂದ ರಾಜ್ಯಾದ್ಯಂತ ಜಾರಿಗೆ ಬರಲಿದೆ. ರಸಗೊಬ್ಬರ ಖರೀದಿ ಪ್ರಕ್ರಿಯೆ ಸರಳಗೊಳಿಸಲು ಕೇಂದ್ರ ಸರ್ಕಾರ ಫರ್ಟಿಲೈಸರ್ ಸೇಲ್ ಅಪ್ಲಿಕೇಷನ್ ಸಿಸ್ಟಂ (ಎಫ್ಎಫ್ಎಸ್) ಎಂಬ ನೂತನ ವ್ಯವಸ್ಥೆ ಜಾರಿಗೊಳಿಸಿದೆ. ಈ ಆ್ಯಪ್ ಅನ್ನು ರೈತರು ಆಂಡ್ರಾಯ್ಡ್ ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿ ಕೊಳ್ಳಬಹುದು. ಮಾಹಿತಿ ಆ್ಯಪ್‌ನಲ್ಲಿ ನಮೂದಿಸಿದರೆ ಅವರಿಗೆ ಸಮೀಪದ ರಸಗೊಬ್ಬರದ ಅಂಗಡಿಯಲ್ಲಿ ಲಭ್ಯವಿರುವುದು ದಾಸ್ತಾನು ಮಾಹಿತಿ ದೊರೆಯಲಿದೆ.

Udayavani pg 08

ಕೃಷಿ ಇಲಾಖೆ ಹುದ್ದೆ ನೇಮಕಾತಿ: ಬಡ್ತಿ ನಿಯಮ ತಿದ್ದುಪಡಿಗೆ ಕರಡು

ಕೃಷಿ ಅಧಿಕಾರಿ ಹುದ್ದೆ: ಶೇ.85 ಕೃಷಿ ಪದವೀಧರರಿಗೆ ಮೀಸಲು

■ ಉದಯವಾಣಿ ಸಮಾಚಾರ

ಬೆಂಗಳೂರು: ಕೃಷಿ ಇಲಾಖೆಯ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ನೇಮಕಾತಿ ಹಾಗೂ ವಿವಿಧ ವೃಂದಗಳ ಬಡ್ತಿ ನಿಯಮಗಳಿಗೆ ತಿದ್ದುಪಡಿ ತರಲು ರಾಜ್ಯ ಸರ್ಕಾರ ಕರಡು ಅಧಿಸೂಚನೆ ಹೊರಡಿಸಿದೆ. ನೇರ ನೇಮಕಾತಿಯ ಶೇ.85 ಹುದ್ದೆ ಕೃಷಿ ಪದವೀಧರರಿಗೆ, ಉಳಿದ ಶೇ.15 ಹುದ್ದೆ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ, ಕೃಷಿ ಮೊರುಕಟ್ಟೆ ಮತ್ತು ಸಹಕಾರ, ಕೃಷಿ ವ್ಯವಹಾರ ನಿರ್ವಹಣೆ, ಕೃಷಿ ಜೈವಿಕ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಕೃಷಿ ಎಂಜಿನಿಯರಿಂಗ್ ಪದವೀಧರರಿಗೆ ಮೀಸಲಿಡಲು ಪ್ರಸ್ತಾಪಿಸಲಾಗಿದೆ ಎಂದು ತಿಳಿಸಲಾಗಿದೆ. ಬಡ್ತಿಗೆ 5 ವರ್ಷ ಸೇವೆಯ ಎಸ್ಸಿ, ಎಸ್ಟಿ ನೌಕರರು ಲಭ್ಯವಿಲ್ಲದಿದ್ದರೆ, 3 ವರ್ಷ ಸೇವೆ ಸಲ್ಲಿಸಿದವರನ್ನು ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ. ಇದು ಸಹಾಯಕ ಕೃಷಿ ನಿರ್ದೇಶಕ, ಕೃಷಿ ಅಧಿಕಾರಿ, ಅಧೀಕ್ಷಕ, ಪ್ರಥಮ ದರ್ಜೆ ಸಹಾಯಕ ಹಾಗೂ ಶೀಘ್ರಲಿಪಿಗಾರರ ಹುದ್ದೆಗಳಿಗೆ ಅನ್ವಯವಾಗಲಿದೆ. ಆಕ್ಷೇಪಣೆಗಳಿದ್ದರೆ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರಿಗೆ 15 ದಿನದಲ್ಲಿ ಸಲ್ಲಿಸಲು ಕೋರಲಾಗಿದೆ.

ತೆಂಗಿನ ಚಿಪ್ಪಿನ ದರ ಕುಸಿತ

• ಎಚ್.ಜೆ.ಪದ್ಮರಾಜು



ತೋವಿನಕೆರೆ (ತುಮಕೂರು): ತೆಂಗಿನ ಚಿಪ್ಪಿನ ದರ ತೀವ್ರ ಕುಸಿದಿದ್ದು, ತೆಂಗು ಬೆಳೆಗಾರರು ಮತ್ತು ಚಿಪ್ಪು ಮಾರಾಟಗಾರರು ನಿರಾಸೆಗೊಂಡಿದ್ದಾರೆ. ಹೊರದೇಶದಿಂದ ಇದ್ದಿಲು (ಆ್ಯಕ್ಟಿವೇಟೆಡ್ ಕಾರ್ಬನ್) ಹೆಚ್ಚಿನ ಪ್ರಮಾಣದಲ್ಲಿ ಆಮದಾಗುತ್ತಿರುವುದೇ ಕುಸಿತಕ್ಕೆ ಕಾರಣವಾಗಿದೆ.

ಇದೇ ವರ್ಷ ಜುಲೈನಲ್ಲಿ ತೋವಿನಕೆರೆ ಗ್ರಾಮದ ರೈತ ಟಿ.ಎ.ಲೋಕೇಶ್ ಅವರು ಟನ್‌ಗೆ ₹35 ಸಾವಿರದಂತೆ ಚಿಪ್ಪು ಮಾರಾಟ ಮಾಡಿ ಗಮನ ಸೆಳೆದಿದ್ದರು. ಈಗ, ತೋವಿನಕೆರೆ ಕಾಂತರಾಜು ಅವರು 478 ಕೆ.ಜಿ ಚಿಪ್ಪನ್ನು ಕೆ.ಜಿ.ಗೆ ₹18ರಂತೆ ಮಾರಾಟ ಮಾಡಿದ್ದಾರೆ. ನಾಲ್ಕು ತಿಂಗಳಲ್ಲಿ ಚಿಪ್ಪಿನ ಬೆಲೆ ಬಿಡ್ತೀರ್ ಕುಸಿದಿದ್ದು, ಟನ್ ₹18 ಸಾವಿರಕ್ಕೆ ಬಂದು ನಿಂತಿದೆ.

'ರಾಜ್ಯದ ಕೊಬ್ಬರಿ ಚಿಪ್ಪಿನಿಂದ ತಯಾರಿಸಿದ ಇದ್ದಿಲು ಹೆಚ್ಚು ಗುಣಮಟ್ಟದಿಂದ ಕೂಡಿದ್ದು, ಕೆ.ಜಿ.ಗೆ ₹105 ಇದೆ. ಈಗ ಫಿಲಿಪ್ಪಿನ್ಸ್, ಇಂಡೋನೇಷ್ಯಾದಿಂದ ಆಮದಾಗುತ್ತಿರುವ ಇದ್ದಿಲು ಕೆ.ಜಿ ₹65ಕ್ಕೆ ಸಿಗುತ್ತಿದೆ. ವಿದೇಶದಿಂದ ಕಡಿಮೆ ಬೆಲೆಗೆ ಇದ್ದಿಲು ಸಿಗುತ್ತಿದ್ದು, ಸ್ಥಳೀಯವಾಗಿ ತಯಾರಾಗುವ ಇದ್ದಿಲಿಗೆ ಬೇಡಿಕೆ ಕುಸಿದು, ಚಿಪ್ಪಿನ ಬೆಲೆ ಕೂಡ ಇಳಿಕೆಯಾಗಿದೆ' ಎಂದು ಎನ್.ಡಿ.ಎಸ್ ಟ್ರೇಡರ್ಸ್ ಮಾಲೀಕ ದೇವರಾಜು ತಿಳಿಸಿದ್ದಾರೆ.

'ದೇಶದ ಆ್ಯಕ್ಟಿವೇಟೆಡ್ ಕಾರ್ಬನ್ ಉದ್ಯಮಕ್ಕೆ ಮುಂದಿನ ಆರು ತಿಂಗಳು ಮಹತ್ವದ್ದು. ಕಚ್ಚಾವಸ್ತುಗಳ ಬೆಲೆ ವ್ಯತ್ಯಾಸ ಹೀಗೆ ಮುಂದುವರಿದರೆ ಖರೀದಿದಾರರು ಇತರ ದೇಶಗಳನ್ನು ಅವಲಂಬಿಸುವ ಅಪಾಯ ಇದೆ. ಹಾಗಾಗಿ, ಉತ್ಪಾದನಾ ವೆಚ್ಚ ನಿಯಂತ್ರಣ ಆಗಬೇಕಿದೆ' ಎನ್ನುತ್ತಾರೆ ಅವರು.

ರಾಜ್ಯದ ಇದ್ದಿಲಿಗೆ ಮೊದಲಿನಷ್ಟು ಬೇಡಿಕೆ ಇಲ್ಲ. ಇದರಿಂದಾಗಿ ಚಿಪ್ಪು ಖರೀದಿಸಿ, ಇದ್ದಿಲು ಮಾಡುತ್ತಿದ್ದ ಉದ್ಯಮಿಗಳು ದೊಡ್ಡ ನಷ್ಟ ಅನುಭವಿಸುವಂತಾಗಿದೆ. ಬೆಲೆ ಹೆಚ್ಚಿದ್ದಾಗ ಬೀದಿಬೀದಿ ಸುತ್ತಿ ಚಿಪ್ಪು ಖರೀದಿಸಿದ್ದ ಮಧ್ಯವರ್ತಿಗಳು ಕೂಡ ನಷ್ಟ ಅನುಭವಿಸಿದ್ದಾರೆ.

'ತಿಂಗಳ ಹಿಂದೆ ಚಿಪ್ಪು ತೆಗೆದುಕೊಂಡಾಗ ₹38 ಸಾವಿರಕ್ಕೆ ಮಾರಬಹುದು ಎಂದುಕೊಂಡಿದ್ದೆ. ಆದರೆ, ಈಗ ಟನ್ ಬೆಲೆ ₹18 ಸಾವಿರ ಎಂದಾಗ ಬೇಸರವಾಯಿತು. ಒಣಗಿದಷ್ಟು ತೂಕ ಕಡಿಮೆಯಾಗುತ್ತದೆ ಎಂಬ ಕಾರಣಕ್ಕೆ ಅದೇ ಬೆಲೆಗೆ ಮಾರಾಟ ಮಾಡಿದೆ' ಎಂದು ಮಧ್ಯವರ್ತಿಯೊಬ್ಬರು ಹೇಳಿದರು.

Prajavani pg 08

Fertiliser subsidy may overshoot by Rs 1L-cr

GYANENDRA KESHRI
NEW DELHI, DHNS

India's fertiliser subsidy is likely to overshoot the budgetary allocation by over Rs 1 lakh crore in the current financial year as prices of key raw materials such as Ammonia and Sulphur have surged due to the West Asia conflict, analysts said.

The Centre has earmarked Rs 1.71 lakh crore for fertiliser subsidy in the 2026-27 budget. Around 80% of this budgeted amount is estimated to have been exhausted by mid-November.

According to an estimate by ICRA, fertiliser subsidy is likely to hit an all-time high of Rs 2.76 lakh crore in the current fiscal, which will be Rs 1.05 lakh crore higher than the budgetary allocation.



"The increase in subsidy is owing to the sharp increase in the prices of key raw materials such as Ammonia and Sulphur following the conflict in West Asia as the countries in this region are key suppliers of these commodities," ICRA said.

While prices of key fertiliser inputs have moderated from their post-war highs, they remain significantly higher than pre-war levels.

The Union Budget for 2026-27 was presented by Finance Minister Nirmala Sitharaman on February 1, 2026, nearly a month before the start of conflict.

▸ Fertiliser, Page 3B

Dec Hrd pg 01

Fertiliser subsidy may overshoot by Rs 1L-cr

Fertiliser, From Page 1

The current financial year's fertiliser subsidy is likely to exceed the previous peak of Rs 2.55 lakh crore registered in 2022-23 following the onset of the Russia-Ukraine war. In the financial year ended March 2026, fertiliser subsidy stood at Rs 2.11 lakh crore.

The subsidy allocation for Phosphorus and Potassium (P&K) fertilisers has been budgeted at Rs. 0.54 lakh crore for FY2027, while that of urea stands at Rs 1.17 lakh crore. The actual expenditure on both these segments is estimated to be sharply higher.

ICRA estimates the subsidy requirement for the P&K fertiliser segment to be Rs 1.02 lakh crore for FY2027 against the budgetary allocation of Rs. 0.54 lakh crore.

The Cabinet recently approved a sharp increase in fertiliser support for the 2026-27 rabi season, lifting the allocation to Rs 62,370 crore.

Indian fertiliser manufacturers source a sizable amount of finished products and raw materials from West Asia, including urea, DAP, ammonia and, most notably, sulphur. Due to the war, the industry diversified its sourcing base towards alternative geographies, though the cost of procurement remains elevated.

The inventory levels remain healthy for urea and P&K fertilisers owing to proactive procurement by the industry and the government. After the successful closure of urea import tenders of 2.5 MMT in April 2026 and 1.7 MMT in June 2026, India Potash Ltd issued a tender of 1.7 MMT, of which less than 25% of the tendered quantity was filled due to aggressive pricing.

Stocks of all major fertilisers are higher on a year-on-year basis as on November 11, 2026. The industry participants have also increased procurement from Russia, North Africa and other regions, ICRA said.

"India is likely to remain reliant on imports for meeting incremental requirements, particularly for urea, DAP and key raw materials such as ammonia and sulphur," it added.

ಕಬ್ಬು, ಭತ್ತ, ತೆಂಗು, ಅಡಕೆ, ಮೆಣಸು, ಬೆಣ್ಣೆಹಣ್ಣು, ಏಲಕ್ಕಿ, ಹಲಸು ಬೆಳೆ ಬೆಳೆಯುತ್ತಿರುವ ರೈತ ದೇವೇಗೌಡ

ಮಿಶ್ರ ಬೇಸಾಯ ಮೂಲಕ ಅಧಿಕ ಆದಾಯ

▸ ಎನ್.ಕೃಷ್ಣೇಗೌಡ, ಪಾಂಡವಪುರ







ಪಾಂಡವಪುರ ತಾಲೂಕಿನ ಹರವು ಗ್ರಾಮದ ರೈತ ದೇವೇಗೌಡ ತಮ್ಮ ಜಮೀನಿನಲ್ಲಿ ಸೊಗಸಾಗಿ ಬೆಳೆದಿರುವ ಅಡಕೆ ಮತ್ತು ತೆಂಗಿನ ಮರಗಳು. ಕಬ್ಬು ತೋಟದಲ್ಲಿ ಬೆಳೆದಿರುವ ಅಡಿಕೆ ಮರಗಳಿಗೆ ಮೆಣಸಿನ ಬಳ್ಳಿಗಳನ್ನು ಹಬ್ಬಿಸಿರುವುದು ಮತ್ತು ತೆಂಗಿನ ಗರಿಗಳನ್ನು ಕೊಳೆಯಲು ಬಿಟ್ಟಿರುವುದು.



ರೈತ ಹರವು ದೇವೇಗೌಡ

• **ಪಾಂಡವಪುರ:** ಆಧುನಿಕ ವ್ಯವಸಾಯ ಪದ್ಧತಿಯಲ್ಲಿ ಎಲ್ಲವನ್ನೂ ಸರಿದೂಗಿಸಿಕೊಂಡು ರೈತರು ಕೃಷಿಯಲ್ಲಿ ಲಾಭ ಗಳಿಸುವುದು ಸವಾಲಿನ ಕೆಲಸವಾಗಿದೆ. ಆದರೆ ಇಲ್ಲೊಬ್ಬ ರೈತರು ತಮ್ಮ ಐದು ಎಕರೆ ಕೃಷಿ ಭೂಮಿಯಲ್ಲಿ ಮಿಶ್ರ ಬೇಸಾಯ ನಡೆಸುವ ಮೂಲಕ ವಾರ್ಷಿಕವಾಗಿ ಲಕ್ಷಾಂತರರೂಪಾಯಿ ಆದಾಯ ಗಳಿಸುತ್ತಿದ್ದು ಇತರ ರೈತರಿಗೆ ಮಾದರಿಯಾಗಿದ್ದಾರೆ.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಹರವು ಗ್ರಾಮದ ರೈತ ದೇವೇಗೌಡ ಅವರೇ ಲಕ್ಷಾಂತರ ರೂಪಾಯಿ ಆದಾಯ ಕಂಡು ಕೊಂಡಿರುವರೈತ. ಒಂದೇ ಬಯಲಿನಲ್ಲಿರುವ ತಮ್ಮ ಐದು ಎಕರೆ ಜಮೀನಿನಲ್ಲಿ ಸಮಗ್ರ ಬೇಸಾಯ ಅಳವಡಿಸಿಕೊಂಡಿರುವ ದೇವೇಗೌಡರು ಇತ್ತ ರಾಸಾಯನಿಕ ಗೊಬ್ಬರವನ್ನು ತಿರಸ್ಕರಿಸದೇ, ಸಾವಯವ ಮತ್ತು ನೈಸರ್ಗಿಕ ಪದ್ಧತಿ ಅಳವಡಿಸಿಕೊಂಡು ಹಸಿರು ಗೊಬ್ಬರ, ತಿಪ್ಪೆ ಗೊಬ್ಬರದ ಜತೆ ಜತೆಗೆ ಅಲ್ಪ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ ಬಳಸಿಕೊಂಡು ಬೇಸಾಯ ಮಾಡುತ್ತಿದ್ದು, ವ್ಯವಸಾಯದಲ್ಲಿ ಆರ್ಥಿಕವಾಗಿ ಕೈಸುಟ್ಟುಕೊಳ್ಳದಂತೆ ಲಾಭ ಗಳಿಸಲು ಸಫಲರಾಗಿದ್ದಾರೆ. ಐದು ಎಕರೆ ಜಮೀನಿನಲ್ಲಿ 150 ವರ್ಷಗಳ ಹಳೆಯದಾದ ಸಿಡಿಎಸ್ ನಾಲಾ ನೀರಿನ ಮೇಲೆ ಅವಲಂಭತರಾಗಿ ಸಾಂಪ್ರಾದಾಯಿಕ ವಾಣಿಜ್ಯ ಬೆಳೆಗಳಾದ ಕಬ್ಬು, ಭತ್ತ, ತೆಂಗು, ಅಡಿಕೆ, ಮೆಣಸು, ಬೆಣ್ಣೆಹಣ್ಣು, ಏಲಕ್ಕಿ, ಹಲಸು ಇತ್ಯಾದಿಗಳನ್ನು ಬೆಳೆದು ವಾರ್ಷಿಕವಾಗಿ ತೃಪ್ತಿಕರವಾದ ಆದಾಯ ಗಳಿಸುತ್ತಿದ್ದಾರೆ. ಗದ್ದೆಯ ಬದುಗಳ ಮೇಲೆ ಅಡಿಕೆ ತೆಂಗು ಬೆಳೆಯಲಾಗಿದ್ದು, ಅಡಿಕೆ ಮರಗಳಿಗೆ ಮೆಣಸಿನ ಬಳ್ಳಿ ಹಬ್ಬಿಸಿದ್ದಾರೆ. ಬದುಗಳ ಮೇಲೆ ತೆಂಗಿನ ಮರ ಬೆಳೆಸಿದರೆ ನೆರಳಿನ ಕಾರಣಕ್ಕೆ ಬೆಳೆ ಬೆಳೆಯುವುದಿಲ್ಲ ಎಂಬ ತಪ್ಪು ಕಲ್ಪನೆ ಯನ್ನು ಕಡೆಗಣಿಸಿ ವಾಸ್ತವತೆಗೆ ಮನ್ನಣೆ ನೀಡಿ ಸಮಗ್ರ ಬೇಸಾಯ ಪದ್ಧತಿ ಅಳವಡಿಕೊಂಡಿದ್ದಾರೆ. ಮಿಶ್ರ ಬೇಸಾಯದ ಹೊರತು ಇತರೆ ಪದ್ಧತಿಯಿಂದ ರೈತ ಲಾಭ ಗಳಿಸುವುದು ಕಷ್ಟಕರ ಎಂಬುದನ್ನು ಅರಿತುಕೊಂಡಿರುವ ಇವರು ಒಂದು ಬೆಳೆ ಕೈಕೊಟ್ಟರೂ ಮತ್ತೊಂದು ಬೆಳೆ ರೈತರ ಕೈಹಿಡಿಯುತ್ತದೆ ಎಂಬ ಕಾರಣಕ್ಕಾಗಿ ಸಮಗ್ರ ಬೇಸಾಯ ಅಳವಡಿಸಿಕೊಂಡಿದ್ದು, ರೈತರು ಆಧುನಿಕ ಬೇಸಾಯ ಪದ್ಧತಿಯಲ್ಲಿ ಬದಲಾವಣೆ ತಂದುಕೊಳ್ಳಬೇಕು ಎಂಬ ಪರಿಕಲ್ಪನೆಗೆ ತಕ್ಕಂತೆ, ಪರಿಸ್ಥಿತಿಗೆ ಅನುಗುಣವಾಗಿ, ವಾತಾವರಣ ಮತ್ತು ಮಣ್ಣಿನ ಗುಣ ಇತ್ಯಾದಿಗಳನ್ನು ಅರಿತು ಸೂಕ್ತವಾದ ಬೆಳೆ ಬೆಳೆದು ಸಫಲತೆ ಕಂಡುಕೊಂಡಿದ್ದಾರೆ.

ಕೃಷಿಗೆ ಅಗತ್ಯವಾದ ಸಲಕರಣೆಗಳು, ಕೃಷಿ ಕಾರ್ಮಿಕರ ಕೂಲಿ, ರಸಗೊಬ್ಬರ, ಕೀಟನಾಶಕ ಇತ್ಯಾದಿಗಳ ಬೆಲೆ ಗಗನಮುಖಿ ಯಾಗಿದ್ದು, ರೈತರು ಕೃಷಿ ಮೇಲೆ ಅವಲಂಭತರಾಗಿ ಬದುಕು ಕಟ್ಟಿಕೊಳ್ಳುವುದು ಕಷ್ಟಕರವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ವ್ಯವಸಾಯದ ಮೂಲಕವೇ ಮಕ್ಕಳ ವಿದ್ಯಾಭ್ಯಾಸ, ಕುಟುಂಬ ನಿರ್ವಹಣೆಯೊಂದಿಗೆ ಜೀವನಾವಶ್ಯಕತೆಯನ್ನು ಪೂರೈಸಿಕೊಂಡು ಎಲ್ಲವನ್ನೂ ಬಲು ಸುಲಭವಾಗಿಸರಿದೂಗಿಸಿಕೊಳ್ಳಬಹುದುಎಂಬುದನ್ನು ಹರವು ದೇವೇಗೌಡರು ತಮ್ಮ ಪರಿಶ್ರಮ ಮತ್ತು ವಿಭಿನ್ನ ಬೇಸಾಯ ಪದ್ಧತಿಯಿಂದಲೇ ಇತರರಿಗೆ ತೋರಿಸಿಕೊಟ್ಟಿದ್ದಾರೆ.

ವ್ಯವಸಾಯ ಪದ್ಧತಿಯನ್ನು ಸುಧಾರಿಸಲು ಸರ್ಕಾರ ಎಷ್ಟೇ ಉತ್ತೇಜನ ನೀಡಿದರೂ, ಮಣ್ಣಿನ ಫಲವತ್ತತೆ, ವಾತಾವರಣ, ನೀರಿನ ಲಭ್ಯತೆ, ಬೆಳೆಗಳಿಗೆ ಕೀಟಭಾಧೆ, ರಾಸಾಯನಿಕ ರಸಗೊಬ್ಬರ ಮತ್ತು ಕೀಟ ನಾಶಕಗಳ ಬಳಕೆಯಿಂದ ಸತ್ವ ಕಳೆದುಕೊಳ್ಳುತ್ತಿರುವ ಭೂಮಿ, ಸೂಕ್ತ ಮಾರುಕಟ್ಟೆ ಸಿಗದಿರುವುದು ಇತ್ಯಾದಿ ಕಾರಣಗಳಿಂದ ರೈತ ನಷ್ಟ ಅನುಭವಿಸುವುದು ಸಾಮಾನ್ಯವಾಗಿದೆ.

ಸಮಗ್ರ ಬೇಸಾಯ ಅಳವಡಸಿಕೊಳ್ಳಿ


ಅಪ್ಪ ಹಾಕಿದ ಆಲದ ಮರ ಎಂಬಂತೆ ನಾವು ಬೇಸಾಯ ಪದ್ಧತಿಯಲ್ಲಿ ಬದಲಾವಣೆ ಮಾಡಿಕೊಳ್ಳದಿದ್ದರೆ ಉತ್ತಮ ಬೆಳೆ ಕಾಣಲು ಸಾಧ್ಯವಿಲ್ಲ. ಇಂತಹ ಪದ್ಧತಿಯಲ್ಲೇ ಬೇಸಾಯ ಮಾಡಬೇಕು ಎಂಬುದನ್ನು ಬಿಟ್ಟು, ಮಣ್ಣಿನ ಫಲವತ್ತತೆ ಹೆಚ್ಚಿಸಿಕೊಂಡು ಲಭ್ಯವಿರುವ ನೀರು, ಮಣ್ಣಿನ ಗುಣ ಇತ್ಯಾದಿಗಳನ್ನು ಸ್ಪಷ್ಟವಾಗಿ ಅರಿತು ಅದಕ್ಕೆ ತಕ್ಕಂತೆ ಬೆಳೆ ಬೆಳೆದರೆ ನಷ್ಟ ಸಂಭವಿಸುವುದಿಲ್ಲ. ಕಬ್ಬು ಮತ್ತು ಭತ್ತ ಬೆಳೆದು ಹೆಚ್ಚಿನ ಆದಾಯ ಕಾಣಲು ಸಾಧ್ಯವಿಲ್ಲ. ಹೀಗಾಗಿಯೇ ಸಮಗ್ರ ಬೇಸಾಯವನ್ನು ಅಳವಡಿಸಿಕೊಳ್ಳಬೇಕು ಎಂದು ರೈತ ಹರವು ದೇವೇಗೌಡ ತಿಳಿಸಿದರು.


Hosadiganta Pg 07

ಚಂದ್ರನ ಮಣ್ಣಲ್ಲಿ ಆಲೂಗಡ್ಡೆ ಬೆಳೆದ ವಿಜ್ಞಾನಿಗಳು

ಲೂನಾರ್ ಮಣ್ಣಲ್ಲಿ ಸಾವಯವ ಕೃಷಿ

ಚಂದ್ರನ ಮೇಲ್ಮೈಯಲ್ಲಿ ಇರುವ ಮಣ್ಣು ನಮ್ಮ ಭೂಮಿಯ ಮಣ್ಣಿನ ಹಾಗೆ ಫಲವತ್ತತೆಯಿಂದ ಕೂಡಿಲ್ಲ. 'ಲೂನಾರ್ ರೆಗೋಲಿತ್' ಎಂಬ ಪುಡಿಯಾದ ಕಲ್ಲುಮತ್ತು ಧೂಳಿನಿಂದ ಕೂಡಿದ ಈ ಮಣ್ಣಿನಲ್ಲಿ ಸಾರಜನಕ ಇಲ್ಲ. ಅಷ್ಟೇ ಅಲ್ಲದೆ ಆ ಮಣ್ಣಿನಲ್ಲಿ ಭಾರವಾದ ಲೋಹಗಳ ಅಂಶಗಳೂ ಇವೆ. ಇದು ಸಸ್ಯಗಳಿಗೆ ವಿಷಕಾರಿ. ಹಾಗಾಗಿ, ಆ ಮಣ್ಣಿನಲ್ಲಿ ಏನಾದರೂ ಬೆಳೆಸುವುದು ಕಷ್ಟ.





ಭೂಮಿಯಾಚೆಗೆ ವಸಾಹತುಗಳನ್ನು ಸ್ಥಾಪಿಸಲು ಸಿದ್ಧತೆ ಮಾಡಿಕೊಂಡಿರುವ ಮನುಕುಲಕ್ಕೆ ಇದೊಂದು ಹಿನ್ನಡೆ. ಹಾಗಾಗಿಯೇ, ಚಂದ್ರನ ಮಣ್ಣಿನಲ್ಲಿ ಆಹಾರ ಬೆಳೆಯಬಹುದೋ ಅನ್ನುವ ಪ್ರಯೋಗಳು ನಡೆಯುತ್ತಲೇ ಇವೆ. ಅದರಲ್ಲೊಂದು ಪ್ರಯೋಗ ಈಗ ಭರವಸೆಯ ಫಲಿತಾಂಶವನ್ನು ಕೊಟ್ಟಿದೆ.

ನಾಸಾ ಬೆಂಬಲದೊಂದಿಗೆ ಸಂಶೋಧನೆ ಮಾಡುತ್ತಿರುವ ಅಮೆರಿಕದ ಒರೆಗಾನ್ ಸ್ಟೇಟ್ ಯೂನಿವರ್ಸಿಟಿ ಸಂಶೋಧಕರು ಚಂದ್ರನ ಮಣ್ಣನ್ನೇ ಹೋಲುವಂತಹ ಮಣ್ಣಿನಲ್ಲಿ ಆಲೂಗಡ್ಡೆಯನ್ನು ಯಶಸ್ವಿಯಾಗಿ ಬೆಳೆಸಿದ್ದಾರೆ. ಎರೆಹುಳುಗಳು ಸಾವಯವ ತ್ಯಾಜ್ಯವನ್ನು ಕೊಳೆಸಿ ತಯಾರಿಸುವ 'ವರ್ಮಿ ಕಾಂಪೋಸ್ಟ್' ಅನ್ನು ಚಂದ್ರನ ಕೃತಕ ಮಣ್ಣಿಗೆ ಬೆರೆಸಿ ವಿಜ್ಞಾನಿಗಳು ಆಲೂಗಡ್ಡೆ ಬೆಳೆಸಿದ್ದಾರೆ. ಶೇ.5ರಷ್ಟು ವರ್ಮಿ ಕಾಂಪೋಸ್ಟ್ ಮಿಶ್ರಣದಲ್ಲಿ ಬೇರು ಮತ್ತೆ ಗಡ್ಡೆಗಳು ಬೆಳೆದರೆ, ಶೇ.30ರಷ್ಟು ಕಾಂಪೋಸ್ಟ್ ಮಿಶ್ರಣ ಮಾಡಿದಾಗ ಸಾಮಾನ್ಯ ಕೃಷಿಯಲ್ಲಿ ಬೆಳೆಯುವಷ್ಟೇ ಆಲೂಗಡ್ಡೆ ಇಳುವರಿ ಸಿಕ್ಕಿದೆ. ಈಗ ಈ ಸಂಶೋಧನೆ ಯಶಸ್ವಿಯಾಗಿರುವುದರಿಂದ ವಿಜ್ಞಾನಿಗಳು ಟೊಮೆಟೋ, ಸೊಪ್ಪಿನಂತಹ ಬೆಳೆಗಳ ಕಡೆಗೆ ಗಮನ ಹರಿಸಿದ್ದಾರೆ.

ಚಟಾಕಿ: ನಮ್ಮಲ್ಲಿ ಕೃಷಿಕರೇ ಕೃಷಿಯನ್ನು ತೊರೆಯುತ್ತಿರುವ ಪರಿಸ್ಥಿತಿ ಇರುವಾಗ ಚಂದ್ರನಲ್ಲಿಗೆ ಹೋಗಿ ಬೆಳೆಯುವವರಾರು?

V-karnataka Pg 10

Millets and oil seeds drive state's food processing boom

Pearl.DSouza@timesofindia.com



GRAIN OF SATISFACTION: File picture of a visitor checking out varieties of millets at an exhibition. In past five years, govts assisted entrepreneurs Rs 589 crore and 25 are now exporting products

Bengaluru: Millet rotis on American plates and cold-pressed oil in Indian kitchens: small food units in Karnataka are finding takers at home and abroad, with millets and oil seeds leading the way.

Of the 11,384 beneficiaries of the Pradhan Mantri Formalisation of Micro Food Processing Enterprises (PMFME) Scheme, 5,114 (44.92%) took loans for these two segments, data from Karnataka State Agricultural Produce Processing & Export Corporation Ltd, the state nodal agency, shows. The beneficiaries include small entrepreneurs, self-help groups and farmer producer organisations (FPOs). Those producing millet-based products secured 3,329 loans and oil seed-based products 1,785.

Venkatramreddy J Patil, managing director, told TOI the trend is demand-driven, with seeds sown nearly a decade ago. "Ever since 2017, we have been holding events including international trade fairs promoting organic food and millets," he said. "Millets also happen to be in Karnataka's food basket, one of our major crops. Also demand from health-conscious consumers for cold pressed oil is growing fast," he said.

Of the beneficiaries given Rs 589 crore by the Centre and state govt over five years, 25 have begun exporting. "These are largely millets again," said Patil, citing jowar rotis sent to the US and Canada. Oil products serve domestic needs, as India still depends on imports of edible oil and pulses.

Channaiah Y Hiremath, director, Jawari Foods, which exports jowar rotis and other value-added products to the US, UK, Australia and Singapore, said his sister Shilpa Mantangani launched the unit in 2016 and began exporting to Singapore within two years.

"A PMFME loan helped us expand and upgrade technology, and an exhibition connected us to markets overseas," Hiremath said. "It helped us take our products to other countries, and increase annual turnover from Rs 40 lakh to Rs 1 crore."

Times of Ind Pg 06

ವಿದ್ಯಾರ್ಥಿವೇತನಕ್ಕೆ ಅರ್ಜಿ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ವತಿಯಿಂದ 2026-27ನೇ ಸಾಲಿನ ಕೃಷಿಕ್ ಎಂಡೋಮೆಂಟ್ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಾರ್ಯದರ್ಶಿ ಟಿ.ತಿಮ್ಮೇಗೌಡ ತಿಳಿಸಿದ್ದಾರೆ.

ಪಿಯುಸಿ, ಪದವಿ, ವೃತ್ತಿಪರ ಸ್ನಾತಕ, ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಶೇ 90ರಷ್ಟು ಅಂಕ ಅಥವಾ 9/10 ಸಿಜಿಪಿಎ ಗ್ರೇಡ್ ಪಡೆದು, ವಿದ್ಯಾಭ್ಯಾಸ ಮುಂದುವರಿಸಲು ಇಚ್ಛಿಸುವ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಇತರೆ ಅರ್ಹತೆ: ಒಂದು ಹೆಕ್ಟೇರ್‌ಗಿಂತ ಕಡಿಮೆ ಒಣ ಭೂಮಿಯುಳ್ಳ ಸಣ್ಣ/ಅತಿ ಸಣ್ಣ ವ್ಯವಸಾಯಗಾರರ ಮಕ್ಕಳಾಗಿರಬೇಕು. ವಿದ್ಯಾರ್ಥಿಯು ಗ್ರಾಮೀಣ ಪ್ರದೇಶದ ಶಾಲೆಯಲ್ಲಿ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿರಬೇಕು.

ಆಸಕ್ತರು ಅಧಿಕೃತ ಜಾಲತಾಣ https://ksfkarnataka.com/ನ ಮೂಲಕ ಅರ್ಜಿ ನಮೂನೆ ಡೌನ್‌ಲೋಡ್ ಮಾಡಿ, ತುಂಬಿದ ಅರ್ಜಿಯನ್ನು ಕೇಂದ್ರ ಕಚೇರಿಯ ವಿಳಾಸ, ನಂ.15, 2ನೇ ಮಹಡಿ, ಗಾಲ್ಫ್ ಅವೆನ್ಯೂ ರಸ್ತೆ, ಎಚ್.ಎ.ಎಲ್. ಹಳೆ ವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ, ಬೆಂಗಳೂರು-08 ಇಲ್ಲಿಗೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗೆ 080-25202299, 7625000990, 9901911410 ಸಂಪರ್ಕಿಸಬಹುದು.

Hosadiganta Pg 09

ಭತ್ತದ ಕೊರತೆ ಆತಂಕ, ರೈಸ್ ಮಿಲ್ ನಡೆಸಲು ಮಾಲೀಕರ ಕಸರತ್ತು

ರಾಯಚೂರಿಗೆ ಬಂದ 'ಉತ್ತರ'ದ ಭತ್ತ

• ಚಂದ್ರಕಾಂತ ಮಸಾನಿ

ರಾಯಚೂರು: ಭತ್ತದ ಇಳುವರಿ ಕುಸಿಯುವ ಆತಂಕದಿಂದ ಜಿಲ್ಲೆಯ ಅಕ್ಕಿ ಗಿರಣಿ ಮಾಲೀಕರು ಮುನ್ನೆಚ್ಚರಿಕೆ ಕ್ರಮವಾಗಿ ಉತ್ತರ ಪ್ರದೇಶದಿಂದಲೂ ಭತ್ತ ತರಿಸಿಕೊಳ್ಳುತ್ತಿದ್ದಾರೆ. ಉತ್ತರ ಪ್ರದೇಶದ ಅಮೇಠಿ ಜಿಲ್ಲೆಯ ಗೌರಿಗಂಜ್ ತಾಲ್ಲೂಕಿನಿಂದ ಒಟ್ಟು 2,184 ಟನ್ ಭತ್ತವನ್ನು ಗೂಡ್ಸ್ ರೈಲಿನ 12 ರೇಕ್‌ಗಳಲ್ಲಿ (42 ಬೋಗಿಗಳು) ತರಿಸಿಕೊಳ್ಳಲಾಗಿದೆ.

ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಭತ್ತ ಪ್ರಮುಖ ಬೆಳೆಯಾಗಿದೆ. ಮಳೆ ಕೊರತೆಯಿಂದ ನಿರೀಕ್ಷಿತ ಪ್ರಮಾಣದಲ್ಲಿ ಬೆಳೆ ಬರುವ ಸಾಧ್ಯತೆ ಕಡಿಮೆಯಾಗಿದೆ. ಮಳೆಯಾಶ್ರಿತ ಪ್ರದೇಶಗಳಲ್ಲೂ ಭತ್ತದ ಉತ್ಪಾದನೆ ಕುಸಿದಿದೆ. ಹೀಗಾಗಿ, ಸ್ಥಳೀಯ ಅಕ್ಕಿ ಗಿರಣಿಗಳಿಗೆ ಅಗತ್ಯವಿರುವಷ್ಟು ಭತ್ತ ಲಭ್ಯವಾಗದೇ ಇರಬಹುದು ಎಂಬ ಆತಂಕ ಎದುರಾಗಿದೆ. ಸಾಮಾನ್ಯವಾಗಿ ರಾಯಚೂರು ಎಪಿಎಂಸಿಗೆ ನೆರೆಯ ಆಂಧ್ರಪ್ರದೇಶ ಮತ್ತು ತೆಲಂಗಾಣದ ರೈತರು ಹೆಚ್ಚಿನ ಪ್ರಮಾಣದಲ್ಲಿ ಭತ್ತವನ್ನು ಮಾರಾಟಕ್ಕೆ ತರುತ್ತಾರೆ. ಆದರೆ, ಈ ಬಾರಿ ಉತ್ತರ ಪ್ರದೇಶದಿಂದಲೂ ಭತ್ತ ತರಿಸಿರುವುದು ವಿಶೇಷವಾಗಿದೆ.

ಜಿಲ್ಲೆಯಲ್ಲಿ ಸುಮಾರು 120 ಅಕ್ಕಿ ಗಿರಣಿಗಳಿವೆ. ಇಲ್ಲಿ ಸಂಸ್ಕರಿಸಿ ಪಾಲಿಶ್ ಮಾಡಿದ ಸೋನಾ ಮಸೂರಿ ಅಕ್ಕಿಯು ಶ್ರೀಲಂಕಾ, ಬಾಂಗ್ಲಾದೇಶ ಸೇರಿದಂತೆ ಹಲವು ದೇಶಗಳಿಗೆ ರಫ್ತಾಗುತ್ತದೆ.

ಮುಖ್ಯಾಂಶಗಳು

- ಉತ್ತರ ಪ್ರದೇಶದಿಂದ 2,184 ಟನ್ ಭತ್ತ ಖರೀದಿ
- ಎಂದಿನಂತೆ ಆಂಧ್ರ ಪ್ರದೇಶ, ತೆಲಂಗಾಣದಿಂದ ಬರುತ್ತಿರುವ ಭತ್ತ
- ಅಕ್ಕಿ ಗಿರಣಿ ಅವಲಂಬಿಸಿರುವ 3,000 ಕಾರ್ಮಿಕರು



ರಾಯಚೂರಿನ ಎಪಿಎಂಸಿಗೆ ಬಂದ ಭತ್ತದ ಚೀಲಗಳನ್ನು ಆವರಣದಲ್ಲಿ ಇಡಲಾಗಿದೆ ಚಿತ್ರ: ಶ್ರೀನಿವಾಸ ಇನಾಂದಾರ್

ಕಾರ್ಮಿಕರ ಹಿತದೃಷ್ಟಿಯಿಂದ ಖರೀದಿ: 'ಜಿಲ್ಲೆಯ ಅಕ್ಕಿ ಗಿರಣಿಗಳಲ್ಲಿ ಸುಮಾರು 3 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಈ ಪೈಕಿ ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್ ಸೇರಿದಂತೆ ಉತ್ತರ ಭಾರತದ ಸುಮಾರು 2 ಸಾವಿರ ಕಾರ್ಮಿಕರಿದ್ದಾರೆ' ಎಂದು ರೈಸ್ ಮಿಲ್ ಮಾಲೀಕರೊಬ್ಬರು ಹೇಳಿದರು. 10

ರಾಯಚೂರು ಎಪಿಎಂಸಿಗೆ ಒಂದೇ ದಿನ 45 ಸಾವಿರ ಚೀಲ ಭತ್ತ ಬಂದಿದೆ. ಭತ್ತ ಸಂಗ್ರಹಿಸಿ ಇಟ್ಟುಕೊಳ್ಳಲು ಜಾಗದ ಕೊರತೆಯಾಗಿದ್ದರಿಂದ ಶುಕ್ರವಾರ ಖರೀದಿ ನಿಲ್ಲಿಸಲಾಯಿತು
ಆದಪ್ಪ ಗೌಡ
ರಾಯಚೂರು ಎಪಿಎಂಸಿ ಕಾರ್ಯದರ್ಶಿ

ರಾಯಚೂರಿಗೆ ಬಂದ 'ಉತ್ತರ 'ದ ಭತ್ತ

ಒಂದನೇ ಪುಟದಿಂದ...

'ಭತ್ತದ ಕೊರತೆಯಿಂದ ಮಿಲ್‌ಗಳ ಕಾರ್ಯಾಚರಣೆ ಸ್ಥಗಿತಗೊಂಡರೆ ಕಾರ್ಮಿಕರು ಎರಡು-ಮೂರು ತಿಂಗಳು ಕೆಲಸವಿಲ್ಲದೆ ಊರಿಗೆ ಮರಳಬೇಕಾಗುತ್ತದೆ. ಬಳಿಕ ಅವರು ಮತ್ತೆ ಕೆಲಸಕ್ಕೆ ಮರಳುವ ಸಾಧ್ಯತೆ ಕಡಿಮೆ. ಹೀಗಾಗಿ, ರೈಸ್ ಮಿಲ್‌ಗಳು ಬಂದ್ ಆಗದಂತೆ ಮುನ್ನೆಚ್ಚರಿಕೆ ವಹಿಸಿ ಹೊರ ರಾಜ್ಯಗಳಿಂದ ಭತ್ತ ಖರೀದಿಸಲಾಗುತ್ತಿದೆ' ಎಂದು ಅವರು ತಿಳಿಸಿದರು.

ದರದಲ್ಲಿ ಏರಿಳಿತ: ರಾಯಚೂರು ಎಪಿಎಂಸಿಗೆ 15 ದಿನಗಳಿಂದ ಆಂಧ್ರಪ್ರದೇಶ ಮತ್ತು ತೆಲಂಗಾಣದಿಂದ ಹೊಸ ಭತ್ತದ ಆವಕವಾಗುತ್ತಿದೆ. ನವೆಂಬರ್ ಆರಂಭದಲ್ಲಿ ಏರಿಳಿತ ಕಂಡಿದ್ದ ಭತ್ತದ ದರ ಬಳಿಕ ನಿಧಾನವಾಗಿ ಏರಿಕೆಯಾಗುತ್ತಿದೆ.

'ಸರ್ಕಾರ ಭತ್ತ ಖರೀದಿಗೆ ಮಿತಿ ಹೇರಿದರೆ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಲಿದೆ. ಉತ್ತರ ಪ್ರದೇಶದ ಭತ್ತ ಗುಣಮಟ್ಟದ್ದಾಗಿಲ್ಲ. ಸ್ಥಳೀಯ ಭತ್ತಕ್ಕೆ ಬೇಡಿಕೆ ಇದೆ. ಪ್ರಸ್ತುತ ಅಕ್ಕಿ ಬೆಲೆ ಕಡಿಮೆಯಾಗಿದೆ, ಭತ್ತದ ಬೆಲೆ ಕಡಿಮೆಯಾಗಿಲ್ಲ. ಆದರೆ, ಹೊಸ ವರ್ಷದಲ್ಲಿ ಅಕ್ಕಿ ಬೆಲೆ ಹೆಚ್ಚಳವಾಗಲಿದೆ' ಎನ್ನುತ್ತಾರೆ ಕರ್ನಾಟಕ ರಾಜ್ಯ ಅಕ್ಕಿ ಗಿರಣಿ ಮಾಲೀಕರ ಸಂಘದ ಕಾರ್ಯಾಧ್ಯಕ್ಷ ಸಾವಿತ್ರಿ ಪುರುಷೋತ್ತಮ.

ಅಕ್ಟೋಬರ್ 31ರಂದು ಸಣ್ಣ ಭತ್ತದ ಗರಿಷ್ಠ ಬೆಲೆ ಪ್ರತಿ ಕ್ವಿಂಟಲ್‌ಗೆ ₹4,320 ಇತ್ತು. ನವೆಂಬರ್ 2ರಂದು ₹4,100ಕ್ಕೆ ಇಳಿದಿತ್ತು. ಗುರುವಾರ ₹4,165 ಇತ್ತು ಎಂದು ಎಪಿಎಂಸಿ ಕಾರ್ಯದರ್ಶಿ ಆದಪ್ಪ ಗೌಡ ತಿಳಿಸಿದರು.

Prajavani Pg 01

Five new frog species in Arunachal Pradesh

Researchers have discovered five new frog species in the forests of Arunachal Pradesh, including India's first documented snail-eating frog, highlighting the rich biodiversity of the Eastern Himalayas.

The new species belong to the genus Jingophrys, commonly known as Diminutive Horned Frogs, and were identified following five years of field exploration by researchers from Delhi University and Harvard University. The genus is characterised by prominent, horn-like skin structures around the upper eyelids.



Three species have been named after local communities, geography and language. The Tanii Horned Frog (Jingophrys taniitatii) is named after the Tanii tribe of Arunachal Pradesh, which inhabits the Ziro Valley and speaks Apatani. Its scientific name combines 'tanii', referring to the community, with 'tatii', the Apatani word for frogs and toads. The Siang Horned Frog (Jingophrys siangensis) is named after the Siang region. The third species, Jingophrys tanogogo, gets its name from the Apatani word for snails. Researchers discovered whole land snail shells inside its gut using 3D micro-computed tomography (micro-CT) imaging. This is the first documented record of snail-eating behaviour in a frog in India and the first published report of such behaviour in the family Megophryidae, which is widely distributed across Asia. Researchers also found snail shells in the stomach contents of another species, the previously known Jingophrys vegrandis.

"It is surprising that these frogs can ingest complete snail shells much larger than their heads, raising further questions about the feeding mechanisms that enable such behaviour," said S.D. Biju, senior professor at Delhi University and a member of the research team.

The five new species increase the known diversity of Jingophrys in India seven-fold. The study also records two species previously known from China for the first time in India. DNA-based analyses reveal distinct evolutionary lineages and rapid diversification of horned frogs in the Eastern Himalayas. Researchers suggest these patterns may be linked to geological and climatic changes over millions of years, including Himalayan uplift and the development of the South Asian monsoon.

The findings reinforce the Eastern Himalayas' status as a critical amphibian hotspot, with significant undocumented biodiversity requiring further research and conservation. "Arunachal Pradesh is a truly understudied region of India hiding rich and endemic frog fauna. Some of the new species are extremely secretive and found in remote forests only during a short breeding season," Biju added. The study, led by Sonali Garg of Harvard University's Museum of Comparative Zoology, was recently published in Royal Society Open Science. - KALYAN RAY

Dec Hrd Pg 05